KATK010054202022

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ವಿಶೇಷ ಮೊಕದ್ದಮೆ.494/2022</u>**

ಪ್ರಾ.ಸಾ. ಃ **1**

ದೋ.ಸಾ. ಃ **1**

ದಿ.**15.12.2025**

| | |
|---|---|
| ಹೆಸರು | ಃ ದರ್ಶನ್ |
| ತಂದೆಯ ಹೆಸರು | ಃ ಗುರುಸ್ವಾಮಯ್ಯ |
| ವಯಸ್ಸು | ಃ **30** ವರ್ಷ |
| ಉದ್ಯೋಗ | ಃ ಹೋಟೆಲ್ ಕೆಲಸ |
| ವಾಸಸ್ಥಳ | ಃ ಕ್ಯಾತ್ಸಂದ್ರ |

ಸಾಕ್ಷಿಯನ್ನು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ</u>**

1. ನನಗೆ ಪವನ್ ಗೊತ್ತಿಲ್ಲ. ದಿನಾಂಕ **09.01.2021** ರಂದು ಮಧ್ಯಾಹ್ನ **1.30** ಗಂಟೆಗೆ ತುಮಕೂರಿನ ಲೈಬ್ರರಿ ಕಟ್ಟಡದ ಮುಂದುಗಡೆ ನಿಂತಿದ್ದೆನು. ಅಲ್ಲಿಗೆ ಅಬಕಾರಿ ಇಲಾಖೆಯ ವಾಹನ ಬಂದಿತು. ಚೋಳಂಬಳ್ಳಿ ಗ್ರಾಮದಲ್ಲಿ ಗಾಂಜಾ ಪ್ರಕರಣ ಆಗಿದೆ, ಪಂಚನಾಮೆಗೆ ಸಹಕರಿಸಬೇಕೆಂದು ನೋಟೀಸ್ ಕೊಟ್ಟರು. ಆ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಶಾನೆ ಪಿ1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ1(ಎ) ಎಂದು ಗುರುತಿಸಲಾಯಿತು. ಪವನ್ ಕೂಡಾ ಅಲ್ಲಿಯೇ ಇದ್ದರು. ಅಬಕಾರಿ ಅಧಿಕಾರಿಗಳು ನನ್ನನ್ನು ಮತ್ತು ಪವನ್ ನನ್ನು ಆ ಜೀಪಿನಲ್ಲಿ ಹತ್ತಿಸಿಕೊಂಡರು. ಮಾತನಾಡಿಸುವಾಗ ಆತ ಪವನ್ ಎಂದು ಗೊತ್ತಾಯಿತು.
2. ನಮ್ಮನ್ನು ಚೋಳಂಬಳ್ಳಿಗೆ ಕರೆದುಕೊಂಡು ಹೋದರು. ಸಿದ್ದಿಖ್ ಪಾಷರವರ ಮನೆಯ ಹತ್ತಿರ ಹೋದೆವು. ಆರೋಪಿಯ ಮನೆಯ ಹತ್ತಿರ ಗಾಂಜಾ ಗಿಡಗಳನ್ನು ತಪಾಸಣೆ ಮಾಡಿದರು. ಒಟ್ಟು **4** ಗಾಂಜಾ ಗಿಡಗಳು ಸಿಕ್ಕಿದವು. ಆ **4** ಗಾಂಜಾ

ಗಿಡಗಳನ್ನು 2 ಚೀಲಗಳಿಗೆ ಹಾಕಿದರು. ತೂಕದ ಇನ್ಸ್ ಪೆಕ್ಟರ್ ಇದ್ದು, ಅವುಗಳನ್ನು ತೂಕ ಮಾಡಿದರು. ಅವರ ಮನೆಯ ಒಳಗಡೆ ತಪಾಸಣೆ ಮಾಡಿದರು. ಮನೆಯ ಒಳಗಡೆ ಬೀರುವಿನಲ್ಲಿ ಒಂದು ಡಬ್ಬ ಸಿಕ್ಕಿತು. ಆ ಡಬ್ಬದಲ್ಲಿ ಗಾಂಜಾ ಬೀಜಗಳು ಇದ್ದವು. ಅದನ್ನು ಕವರ್ ಗೆ ಹಾಕಿ ಸೀಲ್ ಮಾಡಿದರು. ಅವುಗಳನ್ನು ಕಛೇರಿಗೆ ತೆಗೆದುಕೊಂಡು ಬಂದರು. ಆ ದಿನ ಪೊಲೀಸರು ಮಹಜರ್ ಮಾಡಿ ಫೋಟೋ ತೆಗೆದುಕೊಂಡರು. ಆ ಮಹಜರ್ ನ್ನು ನೋಡುತ್ತಿದ್ದು, ಅದನ್ನು ನಿಶಾನೆ ಪಿ2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ2(ಎ) ಎಂದು ಗುರುತಿಸಲಾಯಿತು. 4 ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಶಾನೆ ಪಿ3 ರಿಂದ 6 ಎಂದು ಗುರುತಿಸಲಾಯಿತು. ಆ ದಿನ ಈ ನ್ಯಾಯಾಲಯದ ಮುಂದಿರುವ ಆರೋಪಿ ಅಲ್ಲಿ ಇದ್ದನು.

(ಮುಂದುವರೆದ ಮುಖ್ಯ ವಿಚಾರಣೆಯನ್ನು ಮಾನ್ಯ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಮುಂದೂಡಲಾಯಿತು).

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

ಸಾಕ್ಷಿಯನ್ನು ಪುನಃ ದಿನಾಂಕ**.13.07.2026** ರಂದು ಕರೆಯಿಸಿ**,** ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>**

3. ಆ ದಿನ ಆರೋಪಿಯ ಮನೆಯ ಬೀರುವಿನಲ್ಲಿ ಪ್ಲಾಸ್ಟಿಕ್ ಡಬ್ಬದ ಜೊತೆಗೆ ಬೇರೆ ಏನಿತ್ತು ಎಂದು ಈಗ ನೆನಪಿಲ್ಲ. ವಿಡಿಯೋ ಇರುವ ಸಿಡಿಯನ್ನು ಸಿಡಿ ಪ್ಲೇಯರ್ ಗೆ ಹಾಕಿ ಪ್ಲೇ ಮಾಡಿ ತೋರಿಸಲಾಗಿ ಅದರಲ್ಲಿ ಆರೋಪಿ ಇದ್ದಾನೆ ಎಂದು ಸಾಕ್ಷಿ ಗುರುತಿಸುತ್ತಾರೆ ಮತ್ತು ಅವನ ಮನೆಯ ಒಳಗಿದ್ದ ಬೀರುವಿನಿಂದ ಒಂದು ಪ್ಲಾಸ್ಟಿಕ್ ಕವರ್ ಮತ್ತು ಡಬ್ಬವನ್ನು ತೆಗೆಯುತ್ತಿರುವುದು ಕಂಡುಬರುತ್ತಿದೆ ಎಂದು ಹೇಳುತ್ತಾರೆ. ನಂತರ ಅದನ್ನು ತೂಕ ಮಾಡಿ ಅಮಾನತ್ತುಪಡಿಸಿಕೊಂಡರು. ಗಾಂಜಾ ಗಿಡಗಳನ್ನು ಅಳತೆ ಮಾಡಿ ತೂಕ ಮಾಡಿದರು. ಆ ಸಿಡಿಯನ್ನು ನಿಶಾನೆ ಪಿ**7** ಎಂದು ಗುರುತಿಸಲಾಯಿತು. ಆ ಘಟನಾ ಸ್ಥಳಕ್ಕೆ ಹೋದ ದಿನಾಂಕ **09.11.2021** ಆಗಿತ್ತು. ಆ ದಿನ ಗಾಂಜಾ ಗಿಡಗಳನ್ನು ಮತ್ತು ಗಾಂಜಾವನ್ನು ಅಮಾನತ್ತುಪಡಿಸಿಕೊಂಡಿದ್ದು ಆರೋಪಿಯ ಮನೆ ಮತ್ತು ಹಿತ್ತಿಲಿನಲ್ಲಿ. ಈ ಬಗ್ಗೆ ಅಬಕಾರಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**<u>ಪಾಟೀ ಸವಾಲು ಶ್ರೀ.ಮೊಹಮದ್ ಜಬೀವುಲ್ಲಾ ವಕೀಲರಿಂದ ಆರೋಪಿತನ ಪರವಾಗಿ :</u>**

(ಪಾಟೀ ಸವಾಲನ್ನು ಮಧ್ಯಾಹ್ನ **2.45** ಗಂಟೆಗೆ ಮುಂದೂಡಲಾಯಿತು).

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಪಾಟೀ ಸವಾಲು ಶ್ರೀ ಮೊಹಮದ್ ಜಬೀವುಲ್ಲಾ ವಕೀಲರಿಂದ ಆರೋಪಿತನ ಪರವಾಗಿ :</u>**

4. ನಾನು ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಮಿಲಿಟರಿ ಹೋಟೆಲ್ ನಲ್ಲಿ ಸಪ್ಲೈಯರ್ ಆಗಿ ಕೆಲಸ ಮಾಡುತ್ತೇನೆ. ಊಟಕ್ಕೆ ಬರುವಾಗ ಮದ್ಯಪಾನ ಕೊಂಡು ಸೇವನೆ ಮಾಡುತ್ತಾರೆ. ನನಗೆ ಅಬಕಾರಿ ಇಲಾಖೆಯವರ ಪರಿಚಯವಿಲ್ಲ. ಅಬಕಾರಿ ಇಲಾಖೆಯವರು ನಮ್ಮ ಹೋಟೆಲ್ ಗೆ ಬರುವುದಿಲ್ಲ. ನನ್ನನ್ನು ಅಬಕಾರಿ ಇಲಾಖೆಯವರು ಕರೆಸಿದ್ದು ದಿ.09.11.2021 ರಂದು. ನಾನು ಟೌನ್ ಹಾಲ್ ನ ಗ್ರಂಥಾಲಯದ ಹತ್ತಿರ ನಿಂತಿದ್ದೆನು. ನಾನು ಬೆಂಗಳೂರಿನಿಂದ ತುಮಕೂರಿಗೆ ಬಂದು ಬಸ್ ನಿಂದ ಇಳಿದು ಟೌನ್ ಹಾಲ್ ಗ್ರಂಥಾಲಯದ ಬಳಿ ನಿಂತಿದ್ದೆನು. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ. ನಾನು ಅಲ್ಲಿ ನಿಂತಿದ್ದಾಗ ಅಬಕಾರಿ ಅಧಿಕಾರಿಗಳು ಬಂದು ಚೋಳಂಬಳ್ಳಿ ಗ್ರಾಮಕ್ಕೆ ಹೋಗುವುದಿದೆ ಬನ್ನಿ ಎಂದು ಹೇಳಿದರು, ನಂತರ ಪವನ್ ಅನ್ನು ಕರೆದರು. ಪವನ್ ನನಗೆ ಪರಿಚಯವಿಲ್ಲ. ಪವನ್ ಅನ್ನು ನನಗೆ ವೈಯಕ್ತಿಕವಾಗಿ ಪರಿಚಯ ಮಾಡಿಲ್ಲ, ಮಾತನಾಡುವಾಗ ಗೊತ್ತಾಯಿತು. ಬೊಲೆರೋ ವಾಹನದಲ್ಲಿ ನಮ್ಮನ್ನು ಕರೆದುಕೊಂಡು ಹೋದರು. ನನ್ನನ್ನು ಸೇರಿ 5 ಜನ ಇದ್ದೆವು. ಚೋಳಂಬಳ್ಳಿ ಗ್ರಾಮಕ್ಕೆ ಹೋದಾಗ ಮಧ್ಯಾಹ್ನ 2.30 ಗಂಟೆಯಾಗಿತ್ತು. ಚೋಳಂಬಳ್ಳಿ ಗ್ರಾಮದ ಆರೋಪಿಯ ಮನೆಯ ಹತ್ತಿರ ಅಕ್ಕಪಕ್ಕ ಮನೆಗಳು ಇದ್ದವು. ಎಷ್ಟು ಮನೆಗಳು ಇದ್ದವು ಎಂದು ನಾನು ಗಮನಿಸಿಲ್ಲ. ಆ ಸಮಯದಲ್ಲಿ ಅಕ್ಕಪಕ್ಕದ ಮನೆಯವರು ಕೂಡಾ ಬಂದಿದ್ದರು. ಬೇರೆ ಅಧಿಕಾರಿಗಳು ಕೂಡಾ ಸುಮಾರು ಅರ್ಧ ಗಂಟೆಯಲ್ಲಿ ಬಂದರು. ಸಿದ್ದಿಕ್ ಪಾಷರವರ ಮನೆ ಎಂದು ಅಲ್ಲಿ ಸೇರಿದ್ದವರು ಹೇಳಿದರು. ಆರೋಪಿಯ ಮನೆಯಲ್ಲಿ ಆರೋಪಿ ಇರಲಿಲ್ಲ, ಅವರ ಹೆಂಡತಿ ಮತ್ತು ಬೇರೆ ಯಾರೋ ಇದ್ದರು, ಸ್ವಲ್ಪ ಹೊತ್ತಿನಲ್ಲಿ ಆರೋಪಿ ಬಂದರು. ಮನೆಯ ಒಳಗೆ ಹೋಗಿ ಆರೋಪಿಯನ್ನು ಕರೆಸಿರಿ ಎಂದು ಹೇಳಿದರು. ಮಧ್ಯಾಹ್ನ 3.30 ಗಂಟೆಗೆ ಆರೋಪಿಯನ್ನು ಕರೆಸಿದರು. ಆರೋಪಿಯನ್ನು ಹೇಗೆ ಕರೆಸಿದರು ಎಂದು ನನಗೆ ಗೊತ್ತಿಲ್ಲ. ನಾನು ಆ ದಿವಸ ಆರೋಪಿಯ ಮನೆಗೆ ಹೋಗಿಲ್ಲ, ಅಲ್ಲಿ ಗಾಂಜಾ ಗಿಡ ಇರಲಿಲ್ಲ, ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಅಧಿಕಾರಿಗಳು ಬಂದ

ನಂತರ ಆರೋಪಿ ಬಂದನು. ನಾನು ಆರೋಪಿಯ ಹತ್ತಿರ ಮಾತನಾಡಿಲ್ಲ. ಬೇರೆ ಅಧಿಕಾರಿಗಳು ಆರೋಪಿಯ ಹತ್ತಿರ ಮಾತನಾಡಿದರೇ ಎಂದು ನನಗೆ ಗೊತ್ತಿಲ್ಲ. ಗಾಂಜಾ ಇದ್ದಂತಹ ಜಾಗದ ಚಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. ನಾನು ಮನೆಯ ಒಳಗಡೆ ಹೋಗಿಲ್ಲ, ಮನೆಯ ಒಳಗಡೆ ಹೋಗಿದ್ದವರು ಒಂದು ಪ್ಲಾಸ್ಟಿಕ್ ಕವರ್ ಮತ್ತು ಡಬ್ಬವನ್ನು ಹಿಡಿದುಕೊಂಡು ಬಂದರು. ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಓದಿ ಹೇಳಿಲ್ಲ, ಆದರೆ ನನ್ನ ಸಮಕ್ಷಮ ಬರೆದರು. ತೂಕ ಮತ್ತು ಅಳತೆ ಮಾಡಿ ಬರೆದರು. ಸಾಯಂಕಾಲ **4.30** ಗಂಟೆಗೆ ವಾಪಸ್ ಬಂದೆವು. ಚೋಳಂಬಳ್ಳಿಯಲ್ಲಿ ನನ್ನ ಸಹಿ ಮಾಡಿಸಿಕೊಂಡರು ಮತ್ತು ಅಬಕಾರಿ ಇಲಾಖೆಯ ಕಚೇರಿಯಲ್ಲಿ ಸಹಿ ಮಾಡಿಸಿಕೊಂಡರು. ಯಾವಾಗ, ಯಾವ ಯಾವ ದಾಖಲಾತಿಗೆ ಸಹಿ ಮಾಡಿದ್ದೇನೆಂದು ಈಗ ಹೇಳಲಾಗುವುದಿಲ್ಲ. ನಾನು ಆ ದಿನ ಆರೋಪಿಯ ಮನೆಗೆ ಹೋಗಿಲ್ಲ, ಅಬಕಾರಿ ಅಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು